4811
(B)

<u>ಕರ್ನಾಟಕ ಲೋಕಾಯುಕ್ತ</u>

ಸಂಖ್ಯೆ.ಕಂಪ್ಲೆಂಟ್/ಲೋಕ್/ಬಿಸಿಡಿ/2555/2018/ಡಿಆರ್‌ಇ-03

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿ:26.11.2019.

<u>ನೋಟೀಸ್</u>

ವಿಷಯ:- ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ **ಗುಬ್ಬಲಾಳ ಕೆರೆಯ** ಒತ್ತುವರಿ ಹಾಗೂ ಅಭಿವೃದ್ಧಿಗೆ ಸಂಬಂಧಪಟ್ಟಂತೆ ದಿನಾಂಕ:05.09.2019 ಮತ್ತು 28.05.20199ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ಕ್ರಮ ವಹಿಸತಕ್ಕದ್ದು ಹಾಗೂ ತಮ್ಮ ಅನುಪಾಲನಾ ವರದಿಯನ್ನು ದಿನಾಂಕ:31.01.2020ರೊಳಗಾಗಿ ಈ ಕಚೇರಿಗೆ ಸಲ್ಲಿಸತಕ್ಕದ್ದು.

ಮುಂದುವರೆದು, ಸದರಿ ಪ್ರಕರಣವು **ದಿನಾಂಕ:31-01-2020 ರಂದು 3-00 ಗಂಟೆಗೆ** ಗೌ.ಲೋಕಾಯುಕ್ತರವರ ಮುಂದೆ ನಿಗಧಿಪಡಿಸಿದೆ.

ಗೌ.ಲೋಕಾಯುಕ್ತರವರ ಕಾರ್ಯದರ್ಶಿಗಳು ಹಾಗೂ
ಉಪನಿಬಂಧಕರು ವಿಚಾರಣೆಗಳು-03,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಇವರಿಗೆ,

1. The C.E.O., Namma Bangalore Foundation, 2nd Floor, No.54, Rockline Centre, Richmond Road, Bangalore.
2. The Tahasildar, Bangalore South Taluk, Bangalore.
3. The Assistant Director of Land Records, Bangalore South Taluk, Bangalore.
4. Sri.R.V.Bhat, Law Officer, Karnataka State Pollution Control Board, Church Street, Bengaluru.

# KARNATAKA LOKAYUKTA, BENGALURU

No.Compt/LOK/BCD-2555/2018/ARE-1 Date : 05.09.2019

**GUBBALALA LAKE –**

## O R D E R

On behalf of the complainant Sri H.S.Doreswamy, Sri Lakshmikanth is present. On behalf of Karnataka State Pollution Control Board, Bengaluru Sri R.V.Bhat, Law Officer is present. Sri Ravi.H.R. Surveyor, K.R.Puram, Bengaluru East is present along with Sri Yadunandan.P, Surveyor.

2) Sri Ravi.H.R. Surveyor, K.R.Puram, Bengaluru East submitted that by mistake instead of issuing notice to the Assistant Director of Land Records and Tahsildar, Bengaluru South Taluk, notice has been issued to him. Hence, office is directed to carry out the direction given in my earlier Order dated 28.5.2019. A copy of the earlier order may be sent to them along with this Order.

List this case on **19th November, 2019 at 3.00 p.m.**

P. Vishwanatha Shetty 5/9/2019

**(Justice P.Vishwanatha Shetty)**
Lokayukta
State of Karnataka

*vl

3) Additional Registrar of Enq.1

ಗೌ. ಲೋಕಾಯುಕ್ತರವರ ಆದೇಶದಂತೆ
ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶದ
ಪ್ರತಿಯನ್ನು ರವಾನಿಸಿದ್ದು, ಸ್ವೀಕೃತಿ ಪಡೆಯಲಾಗಿದೆ.
ಆದರೆ ವರದಿ ಬಂದಿರುವುದಿಲ್ಲ ಹಾಗು
ಮಾನ್ಯರ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

## KARNATAKA LOKAYUKTA : BENGALURU

No: Compt/Lok/BCD-2555/2018/ARE-1 Date: 28-05-2019

## ORDER

On behalf of Sri. H.S.Doreswamy, who is the Complainant in this case, Sri. Lakshmikanth is present along with others.

2. On behalf of Bruhat Bengaluru Mahanagara Palike, Bengaluru (herein after referred as **'BBMP'** for short), Sri. K.V.Ravi, Executive Engineer, BBMP (Lakes) is present along with Sri.Lingegowda, Asst. Executive Engineer, BBMP (Lakes).

3. On behalf of Bengaluru Water Supply and Sewerage Board, Bengaluru (herein after referred to **'BWSSB'** for short), Sri. Rangaswamy, Executive Engineer is present.

4. On behalf of Karnataka State Pollution Control Board, Bengaluru (herein after referred to as **'KSPCB'** for short), Sri. S.Rajasekhar, Environmental Officer, Bengaluru City (East) is present, along with Sri. Ramesh, Deputy Environmental Officer.

5. Sri. Ravi H.R., Surveyor, Bengaluru East is present along with Sri. Yadunandan. P, Surveyor.

6. The complainant has filed a statement dated 28-05-2019. The statement of the Complainant indicates the work required to be attended to, by the authorities. It is useful to extract the said statement, which reads as here under:

ದಿನಾಂಕ-28-05-2019

"ಗೆ,

ಅಪರ ನಿಬಂಧಕರು, ವಿಚಾರಣೆಗಳು-1
ಮಾನ್ಯ ಲೋಕಾಯುಕ್ತಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್‌ಅಂಬೇಡ್ಕರ್ ವೀದಿ, ಬೆಂಗಳೂರು-560001

ಮಾನ್ಯರೇ,

ವಿಷಯ :ಗುಬ್ಬಲಾಳ ಕೆರೆಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ
ಉಲ್ಲೇಖ :ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2555/2018

**ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಗುಬ್ಬಲಾಳ ಕೆರೆಯು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗುಬ್ಬಲಾಳ ಸರ್ವೇ ನಂ 25ರಲ್ಲಿ ಒಟ್ಟು 8 ಎಕರೆ 10 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.**

ಈ ಕೆರೆಯಲ್ಲಿ ಕೆಲವು ಸಮಸ್ಯೆಗಳಿದ್ದು, ಅವುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

1. ಈ ಕೆರೆಯು ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ದಾಖಲೆಗಳ ಪ್ರಕಾರ ಒಟ್ಟು 8 ಎಕರೆ 10 ಗುಂಟೆ ವಿಸ್ತೀರ್ಣ ಇದ್ದು, ಅದರಲ್ಲಿ 05 ಗುಂಟೆ ಒತ್ತುವರಿಯಾಗಿದೆ.

2. ಕಂದಾಯ ಇಲಾಖಾ ದಾಖಲೆಯ ಪ್ರಕಾರ ಈ ಕೆರೆಯನ್ನು 24-07-2015ರಂದು ಸರ್ವೇ ಮಾಡಿದ್ದು, ಇಂದಿಗೆ 4 ವರ್ಷಗಳು ಕಳೆದಿರುತ್ತವೆ. ಹಾಗಾಗಿ ಪ್ರಸ್ತುತ ಖಾಸಗಿ ಒತ್ತುವರಿ ಆಗಿರುವ ಸಾಧ್ಯತೆ ಇದ್ದು, ಈ ಕೆರೆಯನ್ನು ಸರ್ವೇ ಮಾಡಬೇಕಿದೆ.

3. ಈ ಕೆರೆಗೆ ಸಂಪೂರ್ಣ ಬೇಲಿ ಹಾಕಿರುವುದಿಲ್ಲ. ಕೆರೆಯ ಸುತ್ತ ಸಂಪೂರ್ಣ ಬೇಲಿಯನ್ನು ಹಾಕಬೇಕಿದೆ

4. ಕೆರೆಗೆ ತ್ಯಾಜ್ಯವನ್ನು ಸುರಿಯಲಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.

5. ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಸಹಿ/-

ಎನ್‌ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು".

7. Sri. Rangaswamy, Executive Engineer, BWSSB, has filed a status report dated 27-05-2019. It is useful to extract the said report, which reads as here under:

"ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಸಂಖ್ಯೆ:ಬೆಂ.ಜ.ಮಂ/ಕಾ.ನಿ.ಅ.(ನಿ)&(ಯೋ)12/ಸ.ಕಾ.ನಿ.ಅ.(ನಿ&ಯೋ)12-2/ಸ.ಅ/19-20 ದಿನಾಂಕ: 27/05/2019.

ಗೆ,

ಮಾನ್ಯ ಕರ್ನಾಟಕ ಲೋಕಾಯುಕ್ತ ರವರಿಗೆ
ಬಹುಮಹಡಿ ಕಟ್ಟಡ,
ಬೆಂಗಳೂರು-01

ವಿಷಯ: ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು ರವರ ಆದೇಶದಂತೆ ಶ್ರೀ.ಹೆಚ್. ಎಸ್.ದೊರೆಸ್ವಾಮಿ ರವರು

ಗುಬ್ಬಲಾಳ ಕೆರೆಗೆ ಸಂಬಂದಿಸಿದಂತೆ ನೀಡಿರುವ ದೂರಿನ ಕುರಿತು
ಬೆಂಜಮಂ ವತಿಯಿಂದ ವರದಿ ಸಲ್ಲಿಸುವ ಕಾಮಗಾರಿಯ ಕುರಿತು.

**ಉಲ್ಲೇಖ:** ನಂ. ಕ.ಲೋಕ್. ಬಿಸಿಡಿ 2555/2018 ದಿನಾಂಕ:20.03.2019

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಬಿ.ಬಿ.ಎಂ.ಪಿ ವ್ಯಾಪ್ತಿಯ ಹೆಮ್ಮಿಗೆಪುರ ವಾರ್ಡ್-197ರಲ್ಲಿರುವ ಗುಬ್ಬಲಾಳ ಕೆರೆಯ ಆಸುಪಾಸಿನ ಬಡಾವಣೆಗಳಿಂದ ಕಲುಷಿತ ಕೊಳಚೆ ನೀರು ನೇರವಾಗಿ ಕೆರೆಗೆ ಹರಿದು ಬರುತ್ತಿದ್ದು ಕೆರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಲಿ ವತಿಯಿಂದ ಕೈಗೊಳ್ಳಬಹುದಾದ ಸೂಕ್ತ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಮಾನ್ಯ ಕರ್ನಾಟಕ ಲೋಕಾಯುಕ್ತರವರು ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಸದರಿ ಕೆರೆಯ ಪರಿಶೀಲನೆಯನ್ನು ಸ.ಕಾ.ನಿ.ಅ.(ನಿ&ಯೋ)-12-2 ರವರಿಂದ ನಡೆಸಲಾಗಿದ್ದು, ಕೆರೆಯು ಅತಿಯಾಗಿ ಮಾಲಿನ್ಯಗೊಂಡಿರುವುದು ಕಂಡುಬಂದಿರುತ್ತದೆ. ಸದರಿ ಕೆರೆಯ ಪಕ್ಕದಲ್ಲಿರುವ ಪ್ರದೇಶದಿಂದ ಮಾತ್ರ ಕಲುಷಿತ ನೀರು ಹರಿದು ಬರುತ್ತಿದ್ದು, ಸದರಿ ಕೆರೆಯು ಬಿ.ಬಿ.ಎಂ.ಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಳಿಸಿರುವ 110 ಹಳ್ಳಿಗಳಿಗೆ ಮೂಲ ಸೌಕರ್ಯ ಒದಗಿಸುವ ಯೋಜನೆಗೆ ಒಳಪಟ್ಟಿದ್ದು, ಹೆಮ್ಮಿಗೆಪುರ ವಾರ್ಡ್-197 ರಲ್ಲಿ ಇನ್ನು ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಲಾಗುತ್ತಿರುತ್ತದೆ.

ಆದ್ದರಿಂದ ಸದರಿ ಕೆರೆಗೆ ಸಂಬಂದಿಸಿದಂತೆ, ಕೆರೆಯ ಅಕ್ಕ ಪಕ್ಕದಲ್ಲಿರುವ ಹಳ್ಳಿಗಳಿಗೆ ಒಳಚರಂಡಿ ಕೊಳವೆಗಳನ್ನು ಅನುಮೋದಿತ ನಕ್ಷೆ ಮತ್ತು ವಿನ್ಯಾಸಗಳ ಆದಾರದ ಮೇಲೆ ಅಳವಡಿಸಬೇಕಾಗಿದ್ದು, ನಂತರದಲ್ಲಿ ಸಂಸ್ಕರಣಾ ಘಟಕ(STP)ಕ್ಕೆ ತ್ಯಾಜ್ಯವನ್ನು ಹರಿಸಬೇಕಾಗಿರುತ್ತದೆಂದು ಈ ನಿಟ್ಟಿನಲ್ಲಿ ಅತಿ ಶೀಘ್ರವಾಗಿ ಕಾಮಗಾರಿಯನ್ನು 110 ಹಳ್ಳಿಗಳ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಗುವುದೆಂದು ಆದ್ಯ ಗಮನಕ್ಕೆ ತರ ಲಾಗಿದೆ.

ಸಹಿ/-
ಕಾ.ನಿ.ಅ.(ನಿ&ಯೋ)-12

8. On behalf of BBMP, Sri. K.V.Ravi, Executive Engineer (Lakes) has filed a status report dated 27-05-2019, which reads as here under:

**"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೆರೆಗಳು ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
3ನೇ ಮಹಡಿ, ಅನೆಕ್ಸ್ ಕಟ್ಟಡ-03, ಎನ್.ಆರ್ ಚೌಕ, ಬೆಂಗಳೂರು-02.

---

ಸಂ: ಉ.ಅ.ಸಂ/(ಕೆರೆಗಳು)/ಪಿ. ಆರ್/ 54/2019-20 ದಿನಾಂಕ: 27/5/19

**ರವರಿಗೆ,**

ಅಪರ ನಿಬಂಧಕರು,
ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಮಾನ್ಯರೇ,

**ವಿಷಯ:** ಹೆಚ್.ಎಸ್. ದೊರೆಸ್ವಾಮಿ ಎಂಬುವವರು ಗುಬ್ಬಲಾಳ ಕೆರೆಗೆ ಸಂಬಂಧಪಟ್ಟಂತೆ ನೀಡಿರುವ ದೂರಿನ ಕುರಿತು.

**ಉಲ್ಲೇಖ:** 1. ತಮ್ಮ ಕಛೇರಿ ಪತ್ರ ಸಂಖ್ಯೆ: ಕಂ.ಲೋಕ್.ಮಿಸಲೇನಿಸ್ 2555/2018, ದಿನಾಂಕ: 20-3-2019.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೊಮ್ಮನಹಳ್ಳಿ ವಲಯದಲ್ಲಿ ಬರುವ ಗುಬ್ಬಲಾಳ ಕೆರೆಗೆ ಗುಬ್ಬಲಾಳ ಗ್ರಾಮ ಸರ್ವೆ ನಂ 25 ರಲ್ಲಿನ 8 ಎಕರೆ 10 ಗುಂಟೆ ಪ್ರದೇಶ ಸೇರಿದ್ದು, ಸದರಿ ಕೆರೆಯ ಬಗ್ಗೆ ಶ್ರೀ.ಹೆಚ್.ಎಸ್. ದೊರೆಸ್ವಾಮಿ ರವರು ಮಾನ್ಯ ಲೋಕಾಯುಕ್ತರು, ಕರ್ನಾಟಕ ಸರ್ಕಾರ ರವರಲ್ಲಿ ದೂರು ಸಲ್ಲಿಸಿದ್ದು, ಸದರಿ ದೂರಿನ ಬಗ್ಗೆ ಮಾನ್ಯ ಲೋಕಾಯುಕ್ತದಲ್ಲಿ ನಂ. ಕಂ.ಲೋಕ್.ಮಿಸಲೇನಿಸ್2555/2018 ರಂತೆ ದಾಖಲಾಗಿದ್ದು, ಈ ಪ್ರಕರಣವು ದಿನಾಂಕ: 21/11/2018 ರಂದು ವಿಚಾರಣೆಗೆ ಬಂದ ಅವಧಿಯಲ್ಲಿ ಪಾಲಿಕೆಯಿಂದ ಸದರಿ ಕೆರೆಯನ್ನು ಅಭಿವೃದ್ಧಿ ಪಡಿಸಲು ರೂ.4.00 ಕೋಟಿಗಳ ಅವಶ್ಯಕತೆಯಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕಾಯುಕ್ತರವರಲ್ಲಿ ವರದಿ ಸಲ್ಲಿಸಲಾಗಿರುತ್ತದೆ.

ಮುಂದುವರೆದು ಪ್ರಕರಣವು ದಿನಾಂಕ:19/3/2019ರಂದು ವಿಚಾರಣೆಗೆ ಬಂದಿದ್ದು, ಮಾನ್ಯ ಲೋಕಸಭಾ ಚುನಾವಣೆ ಪ್ರಕ್ರಿಯೆಗಳು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಲೋಕಯುಕ್ತರು ವಿಚಾರಣೆಯನ್ನು ದಿನಾಂಕ:30/5/2018ಕ್ಕೆ ನಿಗದಿಪಡಿಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ರವರಿಗೆ ದಿನಾಂಕ:28/5/2019ರ ಒಳಗೆ ಸಲ್ಲಿಸುವಂತೆ ಆದೇಶಿಸಿರುತ್ತಾರೆ.

ಗುಬ್ಬಲಾಳ ಕೆರೆಯ ಸಮಗ್ರ ಅಭಿವೃದ್ಧಿಗಾಗಿ 2019-20ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ರೂ.4.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ಬೆಂಗಳೂರು, ದಿನಾಂಕ: 01/02/2019 ರಂತೆ ಬಿಡುಗಡೆಗೊಳಿಸಲಾಗಿರುತ್ತದೆ. ಸದರಿ ಕೆರೆಯಲ್ಲಿ ಆದ್ಯತೆ ಮೇರೆಗೆ ಕೊಳಚೆ ನೀರು ತಿರುವುಗಾಲುವೆ ನಿರ್ಮಾಣ, ಸದರಿ ಕೆರೆಯಲ್ಲಿ ಕ್ರೋಢೀಕೃತವಾಗಿರುವ ಹೂಳನ್ನು ತೆಗೆಯುವುದು, ಏರಿ ನಿರ್ಮಾಣ ಮತ್ತು ಅಭಿವೃದ್ಧಿ, ಕೆರೆಯ ಗಡಿ ಭಾಗಕ್ಕೆ ಚೈನ್ ಲಿಂಕ್ ತಂತಿ ಬೇಲಿ ನಿರ್ಮಿಸುವುದು, ಒಳ ಹರಿವು ಹಾಗೂ ಹೊರ ಹರಿವುಗಳನ್ನು ನಿರ್ಮಿಸುವ ಕ್ರಮ ಕೈಗೊಳ್ಳಲು ಈಗಾಗಲೇ ಟೆಂಡರ್ ಕರೆದಿದ್ದು, ಟೆಂಡರ್ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಅನುಮೋದನೆ ದೊರೆತ ನಂತರ ಕೆಲಸಗಳನ್ನು ಪ್ರಾರಂಭಿಸಲಾಗುವುದು. ಎಂಬ ಮಾಹಿತಿಯೊಂದಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯ ಪ್ರತಿ ಹಾಗೂ ಟೆಂಡರ್ ನೋಟಿಫಿಕೇಷನ್ ಪ್ರತಿಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ
ಕೆರೆಗಳು, ಬಿಬಿಎಂಪಿ".

9. The officers concerned will consider the suggestions given by the Complainant in his statement dated 28-05-2019 as extracted above and take appropriate steps, if need be.

10. In the light what is stated above, I am of the view, that it would be in the interest of justice to give three months time to show further progress in the matter.

11. Communicate this order to the concerned.

List this case on **05-09-2019 at 03-00 p.m.**

28/5/2019

**(Justice P. Vishwanatha Shetty),**
Lokayukta,
Karnataka State.

**AS***

05) 05/09/2019. ARE-1.

ಗೌ. ಲೋಕಾಯುಕ್ತ.

ಕಡೆಯ ಆದೇಶದಂತೆ ಎದುರುದಾರರಿಗೆ ನೋಟಿಸ್ ಜಾರಿ ಮಾಡಿದ್ದು, ಸ್ವೀಕೃತಿ ಬಂದಿದೆ.

ಎದುರುದಾರರಿಂದ ಅನುಪಾಲನಾ ವರದಿ ಬಂದಿರುವುದಿಲ್ಲ.